ರಿಪೀಟ್ ಮಾಡಿಸುತ್ತಿದ್ದರು. ನಾನೂ ನನ್ನ ಆನಂದವನ್ನು ಬಜಾಯಿಸಿದ್ದೇ ಬಜಾಯಿಸಿದ್ದು. ಹಾಗಾಗಿಯೇ ಮುಂದೆ ರಿದಂಪ್ರಿಯ ಸತ್ಯಂ ನಿರ್ದೇಶನದ ಹಾಡುಗಳನ್ನು ಕೇಳುವಾಗೆಲ್ಲ ಇದರ ಹ್ಯಾಂಗೋವರ್ ಕೆಲಸ ಮಾಡಿದೆ. ಸತ್ಯಂಗೆ ಢೋಲಕ್ ಕಂಡರೆ ಬಹಳ ಪ್ರೀತಿ. ಅವರ ಬಹುತೇಕ ಹಾಡುಗಳಲ್ಲಿ ಮೊದಲ ಕೆಲವು ಪದ ಇಲ್ಲವೇ ಒಂದು ಸಾಲಿನ ನಂತರವೇ ರಿದಂ ಪ್ರವೇಶಿಸುತ್ತದೆ. 'ಅಲ್ಲೊಂದು ಲೋಕವುಂಟು; ಬದುಕಲ್ಲಿ ಜೊತೆಯಾಗಿ, ರೋಮಾಂಚನ ನನ್ನೀ ಜೀವನ, ಬಾರೇ ಬಾರೇ ನನ್ನವಳೇ...' ಹೀಗೆ ನೀವೆಷ್ಟು ಹಾಡು ನೆನೆಸಿಕೊಂಡರೂ ಅದು ಲೇಟ್ ಎಂಟ್ರೀ ರಿದಂ ಮಯ. ಹಾಗಾಗಿ **Sathyam thy name is for Rhythem.**

ನನ್ನ ಕಾಲೇಜು ಗೆಳೆಯನೊಬ್ಬನಿಗೆ ಚಿತ್ರಗೀತೆ ಮತ್ತು ತಬಲಾ ಕಂಡರೆ ಭಯಂಕರ ಪ್ರೀತಿ. ಅವನಿಗೆ ತಬಲಾ ನುಡಿಸಲೂ ಬರುತ್ತಿತ್ತು. ನಾವು ಕಾಲೇಜಿಗೆ ಹೋಗಲು ಹದಿಮೂರು ಕಿ.ಮೀ. ಬಸ್ಸಿನಲ್ಲಿ ಹೋಗಬೇಕಿತ್ತು. ನನಗೂ ಹಿಂದಲ ಊರಿಂದ ಅವನು ಬರುತ್ತಿದ್ದ. ಬಸ್ಸಿನಲ್ಲಿ ಅಷ್ಟು ಕಾಲ ಸುಮ್ಮನೆ ಕೂತು ಮಾಡುವುದೇನು? ಅದಕ್ಕೆ ಅವನು ಕಂಡುಕೊಂಡಿದ್ದ ಉಪಾಯ ತನ್ನ ಪ್ರೀತಿಯ ಹಾಡುಗಳನ್ನು ಮನದಲ್ಲೇ ಗುನುಗುತ್ತ ಅದಕ್ಕೆ ಗಂಟಲಲ್ಲಿ ತಬಲಾ ನುಡಿಸಿಕೊಳ್ಳುವುದು. ಆದರೆ ಅದನ್ನು ನೋಡುವವರಿಗೆ ಒಂದು ಮೋಜು. ಅವನ ತಲೆ ಲೈಟಾಗಿ ಆಕಡೆ ಈಕಡೆ ತೂಗುತ್ತ ತಿರುವುತ್ತಿದ್ದರೆ ಅಲ್ಲಿ ಪಲ್ಲವಿ ಶುರುವಾಗಿದೆ ಎಂದರ್ಥ. ಕೆನ್ನೆಗಳು ಸ್ವಲ್ಪ ಸ್ವಲ್ಪವೇ ಉಬ್ಬಿ ಒಳಹೋಗಿ ಹೊರಬಂದು ಉಸಿರನ್ನು ತೂಗಿಸುತ್ತ ಬಾಯಿ ಮಾತ್ರ ಅಲುಗುತ್ತಿದ್ದರೆ ಅಲ್ಲಿ ತಬಲಾ ಹೊಡೆದುಕೊಳ್ಳುತ್ತಿದೆ ಎಂದರ್ಥ. ಮಧ್ಯೆ ಸಾಹಿತ್ಯ ರಸಾಸ್ವಾದನೆಗೆ ಅನುಗುಣವಾಗಿ ಕೊಂಚ ಮೆಲುನಗೆ, ಒಂದೊಂದು ಸಲ ಕೈಯಿಂದಲೂ ತೊಡೆಯ ಮೇಲೆ ಹೊಡೆತ. ಯಾರು ಏನೆಂದುಕೊಂಡರೇನು ನನ್ನ ಆನಂದ ನನಗೆ ಎಂಬುದು ಅವನ ನಿಲುವು. ಮಾರ್ಗ ಮಧ್ಯೆ ಅವನ ಪಕ್ಕ ನನಗೆ ಸೀಟು ಸಿಕ್ಕಿದ ಕೂಡಲೇ ಅದುವರೆಗೆ ತಾನು ಹಾಡಿಕೊಂಡ ಹಾಡು ಬಾರಿಸಿಕೊಂಡ ತಬಲಾವನ್ನು ನನಗೆ ಸಶಬ್ದವಾಗಿ ಒಪ್ಪಿಸುತ್ತಿದ್ದ. ಹಳೆಯ ಹಾಡುಗಳ ಬಗ್ಗೆ ಬಹಳ ಪ್ರೀತಿಯಿದ್ದ ಅವನು ಕಾಲೇಜು ಗ್ಯಾದರಿಂಗ್‌ನಲ್ಲಿ ವಿಠಲಾ... ವಿಠಲಾ... ಎಂದು 'ಭಕ್ತ ಕುಂಬಾರ ' ಹಾಡು ಶುರು ಮಾಡಿದೊಡನೆ ಹುಡುಗರೆಲ್ಲ 'ಓ' ಎಂದು ಕೂಗಿ ಭಕ್ತಿ ಪರವಶತೆಯಿಂದ ಬಾಯಿ ಬಡಿದುಕೊಂಡು ಸ್ಟೇಜಿನಿಂದ ಕೆಳಗಿಳಿಸಿಬಿಟ್ಟರು. 'ಇವರಿಗೆಲ್ಲಾ ಟೇಸ್ಟೇ ಇಲ್ಲ ಕಣಯ್ಯ' ಅಂತ ನನ್ನ ಹತ್ತಿರ ಅಲವತ್ತುಕೊಂಡಿದ್ದ ಪಾಪ.

ನಮ್ಮ ಊರಿನಲ್ಲಿ ಯಾರಿಗಾದರೂ ಮದುವೆಯಾದರೆ ನನಗೆ ಸಂಭ್ರಮವೋ ಸಂಭ್ರಮ. ಹಿಂದಿನ ದಿನ ಸಾಯಂಕಾಲ ಆರು ಗಂಟೆಯಿಂದ ಮರುದಿನ ಬೆಳಿಗ್ಗೆ ಎಂಟು ಗಂಟೆಯವರೆಗೆ ಗ್ರಾಮಾಫೋನ್ ರೆಕಾರ್ಡ್‌ಗಳನ್ನು ಹಾಕುತ್ತಿದ್ದರು. ಎಷ್ಟು ಜೋರಾಗಿ ಅಂದರೆ ಇಡೀ ಊರೇ ಬೆದರುವಷ್ಟು. ತಂದಿದ್ದ ನಾಕಾರು ರೆಕಾರ್ಡುಗಳನ್ನೇ ತಿರುಗಿ ತಿರುಗಿ ಹಾಕಿ ಊರೇ ಬಾಯಿಪಾಠ ಮಾಡುವ ಹಾಗೆ. ಊರಲ್ಲಿ ಯಾರು ಮದುವೆಯಾದರೂ ನನಗೆ ಶಿವರಾತ್ರಿ. ನಿದ್ದೆ, ಕನಸು, ಹಾಡು, ಎಚ್ಚರ ನಿದ್ದೆಗಳ ಮಾಯಾ ಮಾಳವಗೌಳ. ಜೊತೆಗೆ ಬ್ಯಾಂಡ್ ಸೆಟ್. ಆಹಾ ಏನು ಆನಂದ! ಕ್ಲಾರಿಯೋನೆಟ್‌ನವನು ಮುಖ್ಯವಾದಕ. 'ಆ ದೇವರೆ ನುಡಿದ ಮೊದಲ ನುಡಿ ಪ್ರೇಮ ಪ್ರೇಮ' ಅಂತ ಹಾಡನ್ನು ಮೆಲ್ಲಗೆ ಎತ್ತಿ ಕೊಡುವುದೇ ತಡ 'ಡ್ರಮ್, ಟ್ರಂಪೆಟ್, ಕಾಂಗೋ, ಬ್ಯಾಂಗೋ, ಸ್ಯಾಕ್ಸೋಫೋನ್‌ಗಳಲ್ಲಿ ಅದನ್ನು ಅಬ್ಬರಿಸಿ, ಟಪ್ಪಾಂಗುಚ್ಚಿಯಾಗಿಸಿ ಇವರು ಕೆಳಕ್ಕೆ ಕೆಡವಿಬಿಡುತ್ತಿದ್ದರು. ಮತ್ತೆ ಕ್ಲಾರಿಯೋನೆಟ್‌ನವನು ಎತ್ತಿ ಕೊಡುವುದು, ಇವರು ಕೆಡವುವುದು. ಎತ್ತಿನ ಗಾಡಿ ಮೇಲೆ ಗಂಡು ಹೆಣ್ಣಿನ ಮೆರವಣಿಗೆ ಸಂದರ್ಭದಲ್ಲಿ ಗಾಡಿ ಮುಂದೆ ಈ 'ನಾದ